(ಅನುಬಂಧ–I)

290 ಶ್ರೀ ಎನ್.ಎ.ಹ್ಯಾರೀಸ್ (ಶಾಂತಿನಗರ)
ಹೆಚ್.ಹಾಲಪ್ಪ (ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು)

ಅ) ರಾಜ್ಯದಲ್ಲಿ ಪ್ರಸಕ್ತ ಸಾಲಿನಲ್ಲಿ ಹಂಚಿಕೆ ಮಾಡಲಾದ ಬಿಪಿಎಲ್ ಕಾರ್ಡ್‌ಗಳ ಒಟ್ಟು ಸಂಖ್ಯೆ ಎಷ್ಟು;

ರಾಜ್ಯದಲ್ಲಿ ಪ್ರಸಕ್ತ ಸಾಲಿನಲ್ಲಿ (2009–10) ಹಂಚಿಕೆ ಮಾಡಲಾದ ಬಿಪಿಎಲ್ ಪಡಿತರ ಚೀಟಿಗಳ ಒಟ್ಟು ಸಂಖ್ಯೆ 1,34,714 ಇರುತ್ತದೆ.

ಆ) ಈ ಪೈಕಿ ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯಲ್ಲಿ ಹಂಚಿಕೆ ಮಾಡಲಾದ ಕಾರ್ಡುಗಳ ಸಂಖ್ಯೆ ಎಷ್ಟು;

ಪ್ರಸಕ್ತ ಸಾಲಿನಲ್ಲಿ ಬೆಂಗಳೂರು ನಗರ ಜಿಲ್ಲೆ (ಬೆಂಗಳೂರು ಅನೌಪಚಾರಿಕ ಪಡಿತರ ಪ್ರವೇಶ) ಸೇರಿದಂತೆ ಒಟ್ಟು 1,29,241 ಬಿಪಿಎಲ್ ಪಡಿತರ ಚೀಟಿಗಳನ್ನು ವಿತರಣೆ ಮಾಡಲಾಗಿದೆ.

ಇ) ಬಿಪಿಎಲ್ ಕಾರ್ಡ್ ಹೊಂದಲು ನಿಗಧಿ ಪಡಿಸಿರುವ ಮಾನದಂಡವೇನು;

<u>ಬಿಪಿಎಲ್ (ಅಕ್ಷಯ) ಪಡಿತರ ಚೀಟಿ :–</u>

ಗ್ರಾಮಾಂತರ ಪ್ರದೇಶದಲ್ಲಿ 12,000/– ರೂ.ಗಳವರೆಗಿನ ವಾರ್ಷಿಕ ವರಮಾನ, ಪಟ್ಟಣ ಪ್ರದೇಶದಲ್ಲಿ 17,000/– ರೂಗಳವರೆಗಿನ ವಾರ್ಷಿಕ ವರಮಾನವುಳ್ಳ ಕುಟುಂಬಗಲು ಬಿಪಿಎಲ್ ಪಡಿತರ ಚೀಟಿಯನ್ನು ಪಡೆಯಲು ಅರ್ಹರು.

ಕೆಳಕಂಡ ಮಾನದಂಡಗಳಿಗೆ ಒಳಪಟ್ಟ ಕುಟುಂಬಗಳು ಅಕ್ಷಯ ಪಡಿತರ ಚೀಡಿ ಪಡೆಯಲು ಅರ್ಹರಿರುವುದಿಲ್ಲ.

(1) 3 ಹೆಕ್ಟೇರ್ ಒಣ ಭೂಮಿ ಅಥವಾ ತತ್ಸಮಾನವಾದ ನೀರಾವರಿ ಭೂಮಿ ಹೊಂದಿರುವವರು.
(2) ಸ್ಥಿರ ದೂರವಾಣಿ ಹೊಂದಿರುವವರು.
(3) ಸ್ವಂತವಾಗಿ ಯಾರೇ ಡೀಸಲ್/ಪೆಟ್ರೋಲ್ ಇಂಧನ ಬಳಸುವ ವಾಹನ ಹೊಂದಿರುವವರು. (ಲೂನಾ/ ಟಿವಿಎಸ್ ಹೊಂದಿರುವವರನ್ನು ಹೊರತುಪಡಿಸಿ)
(4) ಬ್ಯಾಂಕ್/ಸಹಕಾರಿ ಸಂಘಗಳಲ್ಲಿ 1.00 ಲಕ್ಷಕ್ಕೂ ಮೇಲ್ಪಟ್ಟ ಸಾಲ ಪಡೆದಿರುವವರು;
(5) ಒಂದು ಬೋರ್ ವೆಲ್ ಹೊಂದಿ, ನೀರಾವರಿ ಸೌಕರ್ಯ ಪಡೆಯುತ್ತಿರುವವರು;
(6) ತಿಂಗಳಿಗೆ ರೂ.1,000 ಕ್ಕೆ ಕಡಿಮೆ ಇಲ್ಲದೆ ವೇತನ ಪಡೆಯುವ ಸರ್ಕಾರಿ/ಸರ್ಕಾರೇತರ/ ಖಾಸಗಿ ಸಿಬ್ಬಂದಿಗಳು

(7) ಆದಾಯ ತೆರಿಗೆ ಪಾವತಿಸುವವರು.

(8) ರಿಜಿಸ್ಟರ್ಡ್ ಕಾಂಟ್ರಾಂಕ್ಟರ್, ಎಪಿಎಂಸಿ ಟ್ರೇಡರ್ಸ್/ಕಮಿಷನ್ ಏಜೆಂಟ್ಸ್/ಬೀಚ್/ ರಸಾಯನಿಕ ಗೊಬ್ಬರ ಇತ್ಯಾದಿಗಳ ಮಾರಾಟಗಾರರು.

ಒಟ್ಟಾರೆ ಸಮೀಕ್ಷೆ ಮಾಡುವ ಸಂದರ್ಭದಲ್ಲಿ ಕುಟುಂಬದ ಜೀವನ ಮಟ್ಟವನ್ನು ಕೂಡ ಸಮೀಕ್ಷೆ ಮಾಡಿ ನಿರ್ಣಯಿಸಲಾಗುವುದು.

ನಗರ ಪ್ರದೇಶದಲ್ಲಿ ಮೇಲ್ಕಂಡ ಮಾನ ದಂಡಗಳ ಜೊತೆಗೆ ಈ ಕೆಳಕಂಡ <u>ಮಾನದಂಡಗಳು ಒಳಗೊಂಡಿರುತ್ತವೆ:-</u>

(1) 20' x 30' ಚದರ ಅಡಿ ಅಥವಾ ಅದಕ್ಕಿಂತ ಕಡಿಮೆ ಅಳತೆಯುಳ್ಳ ನಿವೇಶನ ಅಥವಾ ಸರ್ಕಾರದ ಯಾವುದೇ ಗೃಹ ನಿರ್ಮಾಣ ಯೋಜನೆ ಅಡಿಯಲ್ಲಿ ಉಚಿತವಾಗಿ ಮನೆ ನೀಡಿರುವ ಕುಟುಂಬಗಳನ್ನು ಬಿಪಿಎಲ್‌ಗೆ ಒಳಪಟ್ಟಿರುವರೆಂದು ಪರಿಗಣಿಸುವುದು.

(2) ರಸ್ತೆ ಬದಿಯಲ್ಲಿ ಹಾಗೂ ಸಣ್ಣಪ್ರಮಾಣದ ಪೆಟ್ಟಿಗೆ ಅಂಗಡಿಗಳನ್ನು ಇಟ್ಟುಕೊಂಡು ಜೀವನೋಪಾಯಕ್ಕಾಗಿ ವ್ಯವಹಾರ ಮಾಡುತ್ತಿರುವವರನ್ನು ಹೊರತುಪಡಿಸಿ ಉಳಿದ ಸ್ವಂತ ಅಥವಾ ಬಾಡಿಗೆ ಅಂಗಡಿಗಳಲ್ಲಿ ವ್ಯಾಪಾರ ನಡೆಸುತ್ತಿರುವವರು.

(3) ವಾಸದ/ವಾಣಿಜ್ಯ ಉದ್ದೇಶಕ್ಕಾಗಿ ನೀಡಲಾಗಿರುವ ಅಥವಾ ಪಡೆಯಲಾಗಿರುವ ಕಟ್ಟಡಗಳಿಂದ ಬರುವ ಬಾಡಿಗೆ ಮಾಸಿಕ ರೂ.2000/- ಮೀರುವವರು. ಬಿಪಿಎಲ್ ಪಡಿತರ ಚೀಟಿಗೆ ಅರ್ಹರಿರುವುದಿಲ್ಲ.

ಈ) ಫಲಾನುಭವಿಗಳಿಗೆ ನಿಗಧಿಪಡಿಸಿರುವ ಆದಾಯ ಮಿತಿ ಎಷ್ಟು;

ಗ್ರಾಮಾಂತರ ಪ್ರದೇಶದಲ್ಲಿ 12,000/- ರೂ.ಗಳವರೆಗಿನ ವಾರ್ಷಿಕ ವರಮಾನ ಪಟ್ಟಣ ಪ್ರದೇಶದಲ್ಲಿ 17,000/- ರೂ.ಗಳವರೆಗಿನ ವಾರ್ಷಿಕ ವರಮಾನವುಳ್ಳ ಕುಟುಂಬಗಳು ಬಿಪಿಎಲ್ ಪಡಿತರ ಚೀಟಿಯನ್ನು ಪಡೆಯಲು ಅರ್ಹರು.

ಉ) ಈಗಿರುವ ಆದಾಯ ಮಿತಿಯನ್ನು ಇಂದಿನ ಆರ್ಥಿಕ ಸ್ಥಿತಿಗಳಿಗನುಗುಣವಾಗಿ ಹೆಚ್ಚಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಇಲ್ಲ.

300 ಡಾ. ಶರಣಪ್ರಕಾಶ್ ರುದ್ರಪ್ಪ ಪಾಟೀಲ್ (ಸೇಡಂ)

ಶಿವರಾಜ್ ಎಸ್. ತಂಗಡಗಿ(ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು)

ಅ) 2008-09 ಮತ್ತು 2009-10ನೇ ಸಾಲಿನಲ್ಲಿ ಅಳಂದ ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ಖಾಸಗಿ (ರೇಣುಕಾ ಶುಗರ್ಸ್) ಯವರು ಗುತ್ತಿಗೆ ಪಡೆದು ನಡೆಸುತ್ತಿದ್ದು ಕಬ್ಬು ನುರಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಗುತ್ತಿಗೆದಾರರು 2008-2009ನೇ ಹಂಗಾಮಿನಲ್ಲಿ ಕಬ್ಬು ನುರಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆ.

2009-2010ನೇ ಸಾಲಿನ ಕಬ್ಬು ನುರಿಸುವ ಹಂಗಾಮು ಪ್ರಾರಂಭವಾಗಿರುವುದಿಲ್ಲ.